**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ,**
**ತಿಪಟೂರು**

**C.C.No.**1473/2023 **PW-**2, **CW-**2

**ದಿನಾಂಕ: 08.05.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀಧರ್ |
| ತಂದೆಯ ಹೆಸರು | : | ರಾಮಕೃಷ್ಣಯ್ಯ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಕೆ.ಮಲ್ಲೇನಹಳ್ಳಿ |

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :-**

1ನೇ ಆರೋಪಿ ಹಾಗೂ ಚಾಸಾ-1 ರವರು ಗಂಡ ಹೆಂಡತಿ ಅವರ ಪರಿಚಯ ನನಗಿದೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಯಾರು ಯಾರ ಮೇಲೂ ಹಲ್ಲೆ ಮಾಡಿ ಅವಾಚ್ಯ ಶಬ್ಧಗಳಿಂದ ಬೈದು ಪ್ರಾಣ ಬೆದರಿಕೆ ಹಾಕಿರುವುದನ್ನು ನೋಡಿರುವುದಿಲ್ಲ.

***(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು).***

**ಪಾಟೀ ಸವಾಲು : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :-**

1ನೇ ಆರೋಪಿಯು ಚಾಸಾ-1 ರವರು ಪ್ರತಿದಿನ ಕುಡಿದು ಬಂದು ಕಿರುಕಳ ನೀಡುತ್ತಿದ್ದನು ಎಂದರೆ ಸರಿಯಲ್ಲ. ಹಾಗಿದ್ದಾಗ ದಿನಾಂಕಃ 06.07.2023 ರಂದು ಬೆಳಿಗ್ಗೆ 7-30 ಗಂಟೆ ಸಮಯದಲ್ಲಿ ನಾನು ನನ್ನ ಸ್ವಂತ ಕೆಲಸದ ನಿಮಿತ್ತ ಚಾಸಾ-1 ರವರ ಮನೆಯ ಬಳಿ ನಡೆದುಕೊಂಡು ಹೋಗುತ್ತಿದ್ದಾಗ ಚಾಸಾ-1 ರವರು ಮನೆಯ ಮುಂದೆ ನಿಂತಿದ್ದ 1ನೇ ಆರೋಪಿಗೆ ಪಡೆದುಕೊಂಡಿದ್ದ ಸಂಘದ ಸಾಲದ ಹಣವನ್ನು ಕಟ್ಟದೇ ಇದ್ದು ಹಣವನ್ನು ಕೊಡು ಎಂದು ಕೇಳಿದ್ದಕ್ಕೆ 1ನೇ ಆರೋಪಿಯು ಚಾಸಾ-1 ರವರಿಗೆ ಅವಾಚ್ಯ ಶಬ್ಧಗಳಿಂದ ಬೈದರು ಎಂದರೆ ಸರಿಯಲ್ಲ. ಅವರು ಚಾಸಾ-1 ರವರನ್ನು ಬಿಗಿಯಾಗಿ

ಹಿಡಿದುಕೊಂಡಾಗ ಅವರು ಕೂಗಾಡುವ ಶಬ್ಧ ಕೇಳಿ 2ನೇ ಆರೋಪಿಯು ಅಲ್ಲಿಗೆ ಬಂದು ಅಲ್ಲಿಯೇ ಬಿದ್ದಿದ್ದ ಕಲ್ಲನ್ನು ತೆಗೆದುಕೊಂಡು ಚಾಸಾ-1 ರವರ ಯಜಮಾನರು ಯಾವ ಸಂಘದ ಸಾಲವನ್ನು ಕಟ್ಟಿಲ್ಲ, ನೀನೇ ಕಟ್ಟು ಎಂದು ಕಲ್ಲಿನಿಂದ ತಲೆಯ ಎಡಭಾಗಕ್ಕೆ ಹೊಡೆದು ರಕ್ತಗಾಯ ಮಾಡಿದರು ಎಂದರೆ ಸರಿಯಲ್ಲ. ನಂತರ 1ನೇ ಆರೋಪಿಯು ಸಂಘದ ಸಾಲದ ಹಣವನ್ನು ಚಾಸಾ-1 ರವರಿಗೆ ನೀನೇ ಕಟ್ಟು ಇಲ್ಲದಿದ್ದರೇ ಕೊಲೆ ಮಾಡುತ್ತೇನೆ ಎಂದು ಚಾಸಾ-1 ರವರಿಗೆ ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಆಗ ಅಲ್ಲಿಯೇ ಇದ್ದ ನಾನು ಬಂದು ಜಗಳ ಬಿಡಿಸಿದೆನು ಎಂದರೆ ಸರಿಯಲ್ಲ. ನಂತರ 2ನೇ ಆರೋಪಿಯು ಚಾಸಾ-1 ರವರಿಗೆ ಹೊಡೆಯಲು ಉಪಯೋಗಿಸಿದ್ದ ಕಲ್ಲನ್ನು ಸ್ಥಳದಲ್ಲಿಯೇ ಎಸೆದು ಹೋದರು, ಚಾಸಾ-1 ರವರು ಅದನ್ನು ಎತ್ತಿ ಇಟ್ಟುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಗಾಯಗೊಂಡಿದ್ದ ಚಾಸಾ-1 ರವರನ್ನು ನಾನು ಬೈಕಿನಲ್ಲಿ ಕೂರಿಸಿಕೊಂಡು ನೊಣವಿನಕೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೆಂಡು ಹೋಗಿ ಚಿಕಿತ್ಸೆ ಕೊಡಿಸಿದೆನು ಎಂದರೆ ಸರಿಯಲ್ಲ. ನ್ಯಾಯಾಲಯ ಮುಂದಿರುವ ಮುದ್ದೆಮಾಲನ್ನು ಸಾಕ್ಷಿ ನೋಡಿ ಗುರುತಿಸಿರುವುದಿಲ್ಲ. ಈ ವಿಚಾರವಾಗಿ ದಿಃ09.07.2023 ರಂದು ಚಾಸಾ-8 ರವರ ಸಮಕ್ಷಮ ದಿಃ06.07.2023 ..................................... ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿಕೆಯನ್ನು ನೀಡಿರುತ್ತೇನೆ. ಈ ವಿಚಾರಕ್ಕೆ ಸಂಬಂಧ ನಿರಾಕರಿಸಿದ ಮರು ಹೇಳಿಕೆಯನ್ನು ನಿಪಿ-5 ಎಂದು ಗುರುತಿಸಲಾಗಿದೆ. ಆರೋಪಿತರು ನಿಮ್ಮ ಗ್ರಾಮಸ್ಥರಾಗಿರುವ ಕಾರಣ ಅವರೊಂದಿಗೆ ರಾಜೀ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**
**ಮರು ವಿಚಾರಣೆ : ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಅಪರ ಸಿವಿಲ್ ನ್ಯಾಯಾಧೀಶರು, ತಿಪಟೂರು.**